O.S.No.:510/2016
P.W.:1

ಈ ದಿನ ದಿಃ09.04.2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.

**ನಿಶಾನೆ ಪಿ-27 ರಿಂದ ನಿಪಿ-30ಕ್ಕೆ ಸಂಬಂಧಿಸಿದಂತೆ ವಾಟೀ ಸವಾಲುಃ-**

**ಪ್ರತಿವಾದಿಗಳ ಪರ ವಕೀಲರಾದ ಶ್ರೀ ಸಿಜಿಪಿ ರವರಿಂದಃ-**

1 ನಿಪಿ-27 ರ ದಾಖಲೆಯು ಸರ್ವೆ ನಂ.1/10ರ ಜಮೀನಿಗೆ ಸಂಬಂಧಿಸಿದ್ದು ಎಂದರೆ ಸರಿ. ನಿಪಿ-27ಕ್ಕೂ ದಾವಾಸ್ವತ್ತಿಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-28ರಂತೆ ಇರುವ ದಾಖಲೆಯನ್ನು ಮಾಯಮ್ಮ ಮತ್ತು ಅವರ ಮಕ್ಕಳು ಮಾಡಿಕೊಂಡಿರುತ್ತಾರೆ ಎಂದರೆ ಸರಿ. ನಿಪಿ-28ರಲ್ಲಿ ನಮೂದಿಸಿದ ಆಸ್ತಿಗಳಿಗೂ ನನಗೂ ಯಾವುದೇ ಸಂಬಂಧ ಇಲ್ಲ ಎಂದರೆ ಸರಿಯಲ್ಲ. ನಿಪಿ-28ರಲ್ಲಿ ನಮೂದಿಸಿದ ಆಸ್ತಿಗಳಿಗೆ ಈಗ್ಗೆ 30ವರ್ಷಗಳ ಹಿಂದೆ ಇರುವ ಚಕ್ಕುಬಂದಿಗಳು ಈಗ ಇರುವಂತಹ ಚಕ್ಕುಬಂದಿಗಳಿಗೂ ವ್ಯತ್ಯಾಸ ಇರುತ್ತದೆ ಎಂದರೆ ಸರಿ.

2. ನಿಪಿ-30 ಮಾಯಮ್ಮ ರವರು ಲೋನ್ ತೆಗೆದುಕೊಂಡಿರುವಂತಹ ದಾಖಲೆ ಎಂದರೆ ಸರಿ. ಸಾಕ್ಷಿಯು ಮುಂದುವರೆದು ಅವರು ಪೋರ್ಜರಿ ಮಾಡಿ ತೆಗೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಸರ್ವೆ ನಂ.1/10ರ ಜಮೀನು ಯಾವ ಕಾಲಕ್ಕೂ ನಮ್ಮ ಕುಟುಂಬಕ್ಕೆ ಸಂಬಂಧಿಸಿಲ್ಲ ಮತ್ತು ಆ ಜಮೀನಿಗೆ

ಸಂಬಂಧಿಸಿದಂತಹ ದಾಖಲೆಗಳು ಸಹ ನಮ್ಮ ಕುಟುಂಬದವರ ಹೆಸರಿನಲ್ಲಿ ಯಾವತ್ತು ಇರುವುದಿಲ್ಲ ಎಂದರೆ ಸರಿಯಲ್ಲ. ನಾನು ಹಾಜರುಪಡಿಸಿದ ನಿಪಿ-27 ರಿಂದ ನಿಪಿ-30ರ ದಾಖಲೆಗಳಿಗೂ, ನನಗೂ ಮತ್ತು ಈ ದಾವೆಗೂ ಯಾವುದೇ ಸಂಬಂಧ ಇಲ್ಲದೆ ಇದ್ದರು ಅವುಗಳನ್ನು ಅನಾವಶ್ಯಕವಾಗಿ ಈ ಕೇಸಿನಲ್ಲಿ ಹಾಜರುಪಡಿಸಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆಃ- ಇಲ್ಲ.**

(ಸಾಕ್ಷಿಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಖ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**